-''-	ಕೆಲ್ಲೂರ ಕೆರೆ	86 ''
3. ಬಾದಾಮಿ	ರಂಗಸಮುದ್ರ	955 ''
-''-	ಪರವತಿ	51 ''
-''-	ಖಾನಾಪೂರ (ಹಿರೇಮಾಕೋಟ)	102 ''
-''-	ಕೆಲೂಡಿ	58 ''
-''-	ಕೋಟಿಕಲ್ (ದಿಡಿಗಿನಹಳ್ಳಿ)	128 '' ''
-''-	ಹುಲ್ಲಿಕೇರಿ	76 ''
-''-	ಗಂಜಿಕೇರಿ	41 ''
		1944 ''

ಆ) ಮೇಲಿನ ಕೆರೆಗಳಲ್ಲಿ ಶಿರೂರು ಹಾಗೂ ರಂಗಸಮುದ್ರ ಕೆರೆಗಳಿಗೆ ಮಾತ್ರ ದುರಸ್ತಿ ಮತ್ತು ಸುಧಾರಣೆ ಅಡಿಯಲ್ಲಿ ಕೆಲಸ ಕೈಗೊಳ್ಳಲಾಗಿದೆ. ಇದರ ಮೂರು ವರ್ಷಗಳ ವೆಚ್ಚದ ವಿವರ ಈ ಕೆಳಗಿನಂತೆ ಇದೆ.

ಕೆರೆ	95-96		96-97		97-98	
ಹೆಸರು	ಅನುದಾನ	ವೆಚ್ಚ	ಅನುದಾನ	ವೆಚ್ಚ	ಅನುದಾನ	ವೆಚ್ಚ
ಶಿರೂರು	1.00	-	0.50	0.05	4.6	0.08
ರಂಗ ಸಮುದ್ರ	2.00	0.70	0.50	0.97	0.0	0.95

ವಿಷಯ: ಗುಳೇದಗುಡ್ಡ ಮತಕ್ಷೇತ್ರಕ್ಕೆ ವಿದ್ಯುತ್ ಸಂಪರ್ಕ

898 (1209)

ಶ್ರೀ ರಾಜಶೇಖರ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡದ ಮತಕ್ಷೇತ್ರದ ಗುಡೂರು ಗ್ರಾಮದಲ್ಲಿನ ಗಂಗಾನಗರಕ್ಕೆ (ಆಶ್ರಯ ಕಾಲೋನಿ) ವಿದ್ಯುತ್ ಸಂಪರ್ಕ ಕಲ್ಪಿಸುವ ಪ್ರಸ್ತಾವನೆ ಸರ್ಕಾರದವರ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಯಾವಾಗ ಕೆಲಸ ಪ್ರಾರಂಭಿಸಲಾಗುವುದು, ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಶರಣ ಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ಗುಡೂರು ಗ್ರಾಮ ಪಂಚಾಯ್ತಿಯಿಂದ ಮಂಡಳಿಗೆ ರೂ.71,053-00 ಬಾಕಿ ಹಣ ಬರಬೇಕಾಗಿದೆ. ಇದನ್ನು ತುಂಬಿದ ನಂತರ ಈಗಾಗಲೇ ತಯಾರಿಸಲ್ಪಟ್ಟಿರುವ ಅಂದಾಜು ಪಟ್ಟಿಗೆ ಮಂಜೂರಾತಿಯನ್ನು ನೀಡಲಾಗುವುದು. ನಂತರದಲ್ಲಿ ವಿದ್ಯುತ್ ಸಂಪರ್ಕ ನೀಡುವ ಕಾರ್ಯವನ್ನು ಕೈಗೊಳ್ಳಲಾಗುವುದು.

ವಿಷಯ: ರಾಜ್ಯದಲ್ಲಿ ಹಸಿರು ಕಾರ್ಡ್‌ಗಳ ಹಂಚುವಿಕೆ

899 (1213)

ಶ್ರೀ ರಾಜಶೇಖರ ವಿ.ಶೀಲವಂತ (ಗುಳೇದಗುಡ್ಡ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಪ್ರಸಕ್ತ ವರ್ಷ ಎಷ್ಟು ಹಸಿರು ಕಾರ್ಡ್‌ಗಳನ್ನು ಹಂಚಲಾಗುವುದು?

ಆ) ಸರ್ಕಾರ ಹಸಿರು ಕಾರ್ಡ್‌ಗಳ ಫಲಾನುಭವಿಗಳನ್ನು ಯಾವ ರೀತಿ ಆಯ್ಕೆ ಮಾಡುತ್ತದೆ?

ಇ) ಹಸಿರು ಕಾರ್ಡುಗಳನ್ನು ಹೊಂದಿರುವ ಶ್ರೀಮಂತ ವರ್ಗದವರಿಂದ ಕಾರ್ಡ್‌ಗಳನ್ನು ಮರಳಿ ಪಡೆಯಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ರಾಜ್ಯದಲ್ಲಿ ದಿನಾಂಕ 31.12.97ರ ಅಂತ್ಯಕ್ಕೆ 3,57,223 ಅರ್ಜಿಗಳು ಪಡಿತರ ಚೀಟಿಗಳಿಗಾಗಿ ಬಾಕಿ ಉಳಿದಿರುತ್ತವೆ. ಪರಶೀಲನೆಯ ಬಳಿಕ ಅರ್ಹ ಎಲ್ಲಾ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ವಿತರಿಸಲಾಗುವುದು.

ಆ) ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್‌ಸಿಎಸ್ 20 ಡಿಆರ್‌ಎ 97, ದಿನಾಂಕ